10 DATE 8/4/2021

# ಬಸ್ ಮುಷ್ಕರದ ಬವಣೆ–ಜನರ ಹಿಡಿಶಾಪ

# ಪ್ರಯಾಣಿಕರಿಗೆ ಪ್ರಾಣಸಂಕಟ

8/4/21

ಸಂ.ಕ, ಸಮಾಚಾರ ಬೆಂಗಳೂರು

6ನೇ ವೇತನ ಆಯೋಗ ಜಾರಿಗೆ ಸಂಬಂಧಿಸಿದಂತೆ ಸರ್ಕಾರ ಹಾಗೂ ಸಾರಿಗೆ ನೌಕರರ ನಡುವೆ ನಡೆದಿರುವ ಹಗ್ಗಜಗ್ಗಾಟದಿಂದ ರಾಜ್ಯಾದ್ಯಂತ ಬಸ್ / ಪ್ರಯಾಣಿಕರು ಪ್ರಾಣಸಂಕಟ ಅನುಭವಿಸ ಬೇಕಾಗಿದೆ. ಬೇಡಿಕೆ ಈಡೇರುವ ವರೆಗೂ ಮುಷ್ಕರ ನಿಲ್ಲಲ್ಲ ಎಂಬ ಬಿಗಿಪಟ್ಟಿನಿಂದಾಗಿ ಅನಿರ್ದಿಷ್ಟಾವಧಿ ಮುಷ್ಕರ ಖಚಿತವಾಗಿದೆ.

ಸಾರಿಗೆ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸಿ 6ನೇ ವೇತನ ಆಯೋಗ ಜಾರಿ ಅಸಾಧ್ಯ ಎಂದು ಸರ್ಕಾರ ಪುನರುಚ್ಚರಿಸಿದೆ. ಇತ್ತ ನೌಕರರ ಒಕ್ಕೂಟವೂ ಇದನ್ನೇ ಪ್ರಮುಖ ಬೇಡಿಕೆ ಎಂದು ಘೋಷಿಸಿದೆ. ಹಾಗಾಗಿ ಸಮಸ್ಯೆ ಬಗೆಹರಿಯುವ ಯಾವುದೇ ಲಕ್ಷಣಗಳಿಲ್ಲ. ಸರ್ಕಾರದ ಪರ್ಯಾಯ ಕ್ರಮದಂತೆ ರಾಜ್ಯದಲ್ಲಿ ಖಾಸಗಿ ಬಸ್‌ಗಳ ಸಂಚಾರಕ್ಕೆ ಮುಕ್ತ ಅನುಮತಿ ಕೊಟ್ಟಿದ್ದರೂ ಸರ್ಕಾರಿ ಬಸ್‌ಗಳು ನೀಡುತ್ತಿದ್ದ ಪ್ರಮಾಣದಲ್ಲಿ ಸೇವೆ ಕೊಡಲು ಸಾಧ್ಯವಾಗದೆ ಪ್ರಯಾಣಿಕರು ಹೈರಾಣಾಗಿದ್ದಾರೆ.

## ಬಸ್ ಓಡಿಸಿದ್ದಕ್ಕೆ ಸನ್ಮಾನ

ಸರ್ಕಾರಿ ಬಸ್ ಸಂಚಾರ ಸ್ಥಗಿತದ ಕುರಿತು ಕಾರ್ಮಿಕ ಸಂಘಟನೆಗಳಲ್ಲೇ ಗೊಂದಲ ಉಂಟಾಗಿತ್ತು. ಮುಷ್ಕರದ ಕರೆ ಮಧ್ಯೆಯೂ ಬಸ್ ಓಡಿಸಿದ ಬಿಎಂಟಿಸಿ ಚಾಲಕ ತ್ಯಾಗರಾಜ್ ಎಂಬುವರಿಗೆ ಸಾರ್ವಜನಿಕರು ಶಾಲು ಹೊದಿಸಿ ಸನ್ಮಾನಿಸಿದ್ದು ವಿಶೇಷವಾಗಿತ್ತು. ಮುಷ್ಕರದ ಪರಿಣಾಮ ಬೆಂಗಳೂರಿನಲ್ಲಿ 6 ಸಾವಿರ ಬಿಎಂಟಿಸಿ ಬಸ್‌ಗಳು ರಸ್ತೆಗಿಳಿಯದ ಕಾರಣ ದೈನಂದಿನ ಕೆಲಸಕ್ಕೆ ಬಸ್‌ಗಳನ್ನೇ ಅವಲಂಬಿಸಿದ್ದ ಲಕ್ಷಾಂತರ ಮಂದಿ ಪರದಾಡುವಂತಾಯಿತು. ಮುಷ್ಕರದಿಂದ ಅಂತಾರಾಜ್ಯ ಬಸ್‌ಗಳೂ ಪ್ರಯಾಣಿಕರಿಲ್ಲದೆ ಖಾಲಿ ಓಡುವ ಸ್ಥಿತಿಗೆ ತಲುಪಿತ್ತು.

## ಪ್ರಯಾಣಿಕರ ಸುಲಿಗೆ

ಸರ್ಕಾರಿ ಬಸ್ ನಿಲ್ದಾಣಗಳಲ್ಲಿಯೇ ಸ್ಥಳಾವಕಾಶ ಕಲ್ಪಿಸಿ ಪರ್ಯಾಯ ವ್ಯವಸ್ಥೆಗೆ ಬಳಸಿಕೊಳ್ಳುತ್ತಿರುವ ಖಾಸಗಿ ಬಸ್‌ಗಳಲ್ಲಿ ಸರ್ಕಾರದ ನಿಗದಿತ ದರಪಟ್ಟಿ ಮೀರಿ ಪ್ರಯಾಣಿಕರಿಂದ ವಸೂಲಿ ಮಾಡಲಾಗಿದೆ. ದುಬಾರಿ ವಸೂಲಿ ವಿರುದ್ಧ ಕ್ರಮ ಕೈಗೊಳ್ಳುವ ಇಲಾಖೆಯ ಭರವಸೆ ಹುಸಿಯಾಗಿದೆ. ಅಧಿಕಾರಿಗಳು ಅಲ್ಲಲ್ಲಿ ವಾಸ್ತವಸ್ಥಿತಿ ಪರಿಶೀಲಿಸಿದ್ದರೂ ಜಾಣಮೌನ ಪ್ರದರ್ಶಿಸಿರುವುದು ಪ್ರಯಾಣಿಕರ ಆಕ್ರೋಶಕ್ಕೆ ಕಾರಣವಾಗಿದೆ. ಹಲವೆಡೆ ದುಪ್ಪಟ್ಟು ದರ ವಸೂಲಿ ಸಂಬಂಧ ವಾಕ್ಸಮರವೂ ನಡೆದಿದೆ. ಆಟೋರಿಕ್ಷಾಗಳ ಪ್ರಯಾಣ ಕೂಡಾ ಸಾರ್ವಜನಿಕರ ಜೇಬಿಗೆ ಬಿಸಿ ಮುಟ್ಟಿಸಿದೆ.

## ಮುಷ್ಕರಕ್ಕೆ ಒಗ್ಗಟ್ಟಿನ ಬಲ

ಬೆಂಗಳೂರು, ಕೋಲಾರ, ಮೈಸೂರು, ಮಂಡ್ಯ, ಹುಬ್ಬಳ್ಳಿ, ಬಾಗಲಕೋಟೆ, ತುಮಕೂರು, ಹಾವೇರಿ, ಮಂಡ್ಯ, ಚಿತ್ರದುರ್ಗ, ರಾಮನಗರ, ನೆಲಮಂಗಲ, ಯಾದಗಿರಿ, ಕೋಲಾರ ಸೇರಿದಂತೆ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಸಿಬ್ಬಂದಿ ಕರ್ತವ್ಯಕ್ಕೆ ಗೈರಾಗಿದ್ದರು, ಕೊಪ್ಪಳದಲ್ಲಿ ವಿಭಾಗೀಯ ನಿಯಂತ್ರಣಾಧಿಕಾರಿ ಒತ್ತಡ ಹೇರಿ ಸಿಬ್ಬಂದಿಯಿಂದ ಕೆಲವು ಬಸ್ ಓಡಿಸುವಲ್ಲಿ ಯಶಸ್ವಿಯಾಗಿದ್ದಾರೆ.

## ಲಕ್ಷಾಂತರ ಜನರ ಸಂಕಷ್ಟ

ನಿತ್ಯ 75 ರಿಂದ 80 ಲಕ್ಷ ಪ್ರಯಾಣಿಕರು ಬಿಎಂಟಿಸಿ, ಕೆಎಸ್‌ಆರ್‌ಟಿಸಿ, ಈಶಾನ್ಯ, ವಾಯುವ್ಯ ಸಾರಿಗೆಯ ಬಸ್‌ಗಳು ಸೇರಿ 75ಲಕ್ಷದಿಂದ 80 ಲಕ್ಷ ಪ್ರಯಾಣಿಕರು ಬಸ್ ಸಂಚಾರ ಸ್ಥಗಿತದಿಂದ ತೊಂದರೆಗೆ ಸಿಲುಕಿದ್ದಾರೆ. ಬಸ್ ನಿಲ್ದಾಣದಲ್ಲಿ ಪ್ರಯಾಣಿಕರು ಬಸ್‌ಗಾಗಿ ಕಾದು ಕೂತಿದ್ದ ದೃಶ್ಯ ಎಲ್ಲೆಡೆ ಸಹಜವಾಗಿತ್ತು. ಕೆಲವರು ಅನಿವಾರ್ಯವಾಗಿ ಕ್ಯಾಬ್‌ಗಳ ಮೊರೆ ಹೋಗಿದ್ದರು. ಮುಷ್ಕರದ ಬಿಸಿ ತಟ್ಟಿದ್ದರಿಂದ ಪ್ರಯಾಣಿಕರ ಸಂಖ್ಯೆ ಇಳಿಮುಖವಾಗಿತ್ತು. ಆಟೋ ರಿಕ್ಷಾ ಪ್ರಯಾಣದರವೂ ದುಪ್ಪಟ್ಟಾಗಿತ್ತು.



ಸಾರಿಗೆ ನೌಕರರ ಮುಷ್ಕರದ ಹಿನ್ನೆಲೆಯಲ್ಲಿ ಶಾಂತಿನಗರದ ಕೆಎಸ್‌ಆರ್‌ಟಿಸಿ ಡಿಪೋದಲ್ಲಿ ಹವಾನಿಯಂತ್ರಿತ ಬಸ್‌ಗಳು ಸಾಲಾಗಿ ನಿಂತಿರುವುದು.

## ಮಾತುಕತೆಗೆ ಸಿಎಂ ಆಹ್ವಾನ



ಮುಷ್ಕರ ಕೈಬಿಟ್ಟು ಸರ್ಕಾರದ ಜೊತೆ ಚರ್ಚೆಗೆ ಬರುವಂತೆ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಬೆಳಗಾವಿಯ ಯರಗಟ್ಟಿಯಲ್ಲಿ ಸಾರಿಗೆ ನೌಕರರಿಗೆ ಆಹ್ವಾನ ಕೊಟ್ಟಿದ್ದಾರೆ. ಜನತೆಯ ಸಂಕಷ್ಟವನ್ನು ಅರ್ಥೈಸಿಕೊಳ್ಳಿ ಎಂಬ ಕಿವಿಮಾತನ್ನೂ ಹೇಳಿದ್ದು ಪರಿಸ್ಥಿತಿ ಅವಲೋಕಿಸಿ ಅಗತ್ಯವಿದ್ದರೆ ಎಸ್ಮಾ ಜಾರಿಗೂ ಚಿಂತನೆ ನಡೆದಿದೆ ಎಂದು ಸಿಎಂ ಎಚ್ಚರಿಸಿದ್ದಾರೆ. 9 ರಲ್ಲಿ 8 ಬೇಡಿಕೆ ಈಡೇರಿಸಿದ್ದೇವೆ. ಉಪ ಚುನಾವಣೆ ಬಳಿಕ ವೇತನ ಹೆಚ್ಚಿಸಲು ತೀರ್ಮಾನಿಸಲಾಗಿದೆ.

## ಆಗಿರೋ ತಪ್ಪು ಸರಿಪಡಿಸಿ



ಬೇಡಿಕೆ ಈಡೇರಿಸೋವರೆಗೂ ಮುಷ್ಕರ ಕೈಬಿಡಲ್ಲ. ನಮ್ಮ ಸತ್ಯಾಗ್ರಹ ಶಾಂತಿಯುತವಾಗಿ ಅನಿರ್ದಿಷ್ಟಾವಧಿಗೆ ನಡೆಯುತ್ತದೆ. ಆರನೇ ವೇತನ ಆಯೋಗ ಜಾರಿ ಪ್ರಮುಖ ಬೇಡಿಕೆ. ಆರ್ಥಿಕ ಸಂಕಷ್ಟದ ನೆಪ ಬೇಡ. ನೀವೇ ಕೊಟ್ಟಿದ್ದ ಭರವಸೆ ಈಡೇರಿಸಿ ಎಂದು ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿರುವ ನೌಕರರ ಒಕ್ಕೂಟದ ಗೌರವಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್, ಏ.10 ಕ್ಕೆ ಬೆಳಗಾವಿ ವಿಭಾಗ ಸೇರಿದಂತೆ ನಮ್ಮ ಮುಷ್ಕರ ಆಯಾ ವಿಭಾಗಮಟ್ಟಕ್ಕೆ ವಿಸ್ತರಣೆಯಾಗಲಿದೆ ಎಂದರು.


## ಹಠಮಾರಿ ಧೋರಣೆ ಬಿಡಿ

ಎಸ್ಮಾ ಜಾರಿಯಂತಹ ಬೆದರಿಕೆ ತಂತ್ರ ಕೈಬಿಡಿ ಎಂದು ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಹಾಗೂ ಮೇಲ್ಮನೆ ಪ್ರತಿಪಕ್ಷ ನಾಯಕ ಎಸ್.ಆರ್.ಪಾಟೀಲ್ ಒತ್ತಾಯಿಸಿದ್ದಾರೆ. ನೌಕರರ ವಿರುದ್ಧ ಹಠಮಾರಿ ಧೋರಣೆ ಬೇಡ.



ಮಾನವೀಯ ನೆಲೆಗಟ್ಟಿನಲ್ಲಿ ಸರ್ಕಾರ ಅವರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಲು ಮುಂದಾಗಬೇಕು ಎಂದೂ ಒತ್ತಾಯಿಸಿದ್ದಾರೆ. ನಿಮ್ಮ ಉಧಾಸೀನ ಮನಸ್ಥಿತಿಯೇ ಇಂದಿನ ಮುಷ್ಕರಕ್ಕೆ ಕಾರಣವೆಂದು ಟೀಕಿಸಿದ್ದಾರೆ.

## ವಿಶೇಷ ರೈಲುಗಳ ವ್ಯವಸ್ಥೆ



ಬೆಂಗಳೂರಿನಿಂದ ಬೆಳಗಾವಿ, ಕಲಬುರಗಿ, ಬೀದರ್, ಕಾರವಾರ, ವಿಜಯಪುರ, ಶಿವಮೊಗ್ಗ, ಮೈಸೂರು, ಹುಬ್ಬಳ್ಳಿ ಮೊದಲಾದೆಡೆಗೆ ತೆರಳುವ ಪ್ರಯಾಣಿಕರ ಅನುಕೂಲಕ್ಕಾಗಿ ಹೆಚ್ಚುವರಿ ವಿಶೇಷ ರೈಲುಗಳನ್ನು ಒದಗಿಸಲು ರಾಜ್ಯ ಸರ್ಕಾರ ನೈರುತ್ಯ ರೈಲ್ವೇಗೆ ಮನವಿ ಮಾಡಿದ್ದು ಇದು ಗುರುವಾರದಿಂದಲೇ ಜಾರಿಗೆ ಬರುವ ಸಾಧ್ಯತೆ ಇದೆ ಎನ್ನಲಾಗಿದೆ. ಖಾಸಗಿ ವಾಹನಗಳಿಗೆ ಮೋಟಾರು ವಾಹನ ಕಾಯ್ದೆಯಂತೆ ಅಗತ್ಯವಿರುವ ರಹದಾರಿಯಿಂದ ವಿನಾಯಿತಿ ಕೊಡಲಾಗಿದೆ.

- ಸಾರಿಗೆ ನೌಕರರ ಮುಷ್ಕರ ಮುಂದುವರಿಕೆ
- ಸರ್ಕಾರ–ಸಾರಿಗೆ ಸಿಬ್ಬಂದಿಗಳ ಹಗ್ಗಜಗ್ಗಾಟ
- ರಾಜ್ಯಾದ್ಯಂತ ಪ್ರಯಾಣಿಕರ ಪರದಾಟ
- 6ನೇ ವೇತನ ಆಯೋಗ ಜಾರಿಗೆ ಬಿಗಿಪಟ್ಟು
- ಖಾಸಗಿ ಬಸ್‌ಗಳ ಓಡಿಸಿ ಪರ್ಯಾಯ ವ್ಯವಸ್ಥೆ
- ಸರ್ಕಾರದ ನಿಗದಿತ ದರಪಟ್ಟಿ ಮೀರಿ ವಸೂಲಿ
- ಮುಷ್ಕರ ಕೈ ಬಿಟ್ಟು ಮಾತುಕತೆಗೆ ಸಿಎಂ ಆಹ್ವಾನ
- ನೌಕರರ ವಿರುದ್ಧ ಎಸ್ಮಾ ಜಾರಿ ಸರ್ಕಾರ ಚಿಂತನೆ

# ನೀತಿಸಂಹಿತೆ ಸಡಿಲಿಕೆಗೆ ನಕಾರ

ಸಾರಿಗೆ ಮುಷ್ಕರದ ಹಿನ್ನೆಲೆಯಲ್ಲಿ ಈಗಾಗಲೇ ಸರ್ಕಾರ ತೀರ್ಮಾನಿಸಿರುವಂತೆ ವೇತನ ಹೆಚ್ಚಳ ಘೋಷಣೆಗೆ ಚುನಾವಣಾ ನೀತಿ ಸಂಹಿತೆಯಲ್ಲಿ ಸಡಿಲಿಕೆ ಮಾಡುವಂತೆ ಕೋರಿದ್ದ ರಾಜ್ಯ ಸರ್ಕಾರದ ಪ್ರಸ್ತಾವನೆಯನ್ನು ಚುನಾವಣಾ ಆಯೋಗ ತಿರಸ್ಕರಿಸಿದೆ. ಉಪಚುನಾವಣೆ ಹಿನ್ನೆಲೆಯಲ್ಲಿ ಏಪ್ರಿಲ್ 17 ರವರೆಗೂ ನೀತಿ ಸಂಹಿತೆ ಜಾರಿಯಲ್ಲಿರಲಿದೆ. ಆದರೆ ಸಾರಿಗೆ ನೌಕರರ ವೇತನ ಹೆಚ್ಚಳವನ್ನು ಅಧಿಕೃತವಾಗಿ ಪ್ರಕಟಿಸಲು ಸರ್ಕಾರಕ್ಕೆ ಅಡ್ಡಿಯಾಗುತ್ತಿರುವ ಕಾರಣಕ್ಕೆ ಸರ್ಕಾರ ಇದನ್ನು ವಿಶೇಷ ಪ್ರಸಂಗ ಎಂದು ಪರಿಗಣಿಸಿ ಸಡಿಲಿಕೆ ಕೋರಿ ಆಯೋಗಕ್ಕೆ ಮನವಿ ಮಾಡಿತ್ತು. ಆದರೆ ಮುಷ್ಕರ ದಿಢೀರಾಗಿ ನಡೆದಿರುವುದಲ್ಲ. ಜೊತೆಗೆ ಚುನಾವಣಾ ನೀತಿ ಸಂಹಿತೆ ಒಮ್ಮೆ ಸಡಿಲಿಕೆ ಮಾಡಿದರೆ ಮತ್ತೆ ಇದು ಪುನರಾವರ್ತನೆ ಆಗಬಹುದು. ಹಾಗಾಗಿ ಯಾವುದೇ ಕಾರಣಕ್ಕೂ ಸಡಿಲಿಕೆ ಸಾಧ್ಯವಿಲ್ಲ ಎಂದು ಆಯೋಗ ಸ್ಪಷ್ಟಪಡಿಸಿದೆ. ಹಾಗಾಗಿ ಮತದಾನ ಮುಗಿಯುವ (ಏ.17) ತನಕ ಸರ್ಕಾರ ಕಾಯಲೇಬೇಕಾಗಿದೆ.